# ದಿನಾಂಕ 4/2/2008ರಂದು ಜರುಗಿದ ಕರ್ನಾಟಕ ಜೀವವೈವಿಧ್ಯ ಮಂಡಳಿಯ 7ನೇ ಸಭೆಯ ನಡವಳಿಗಳು

**ಸಭೆಗೆ ಹಾಜರಾದವರು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಹಾಗೂ ಅಧ್ಯಕ್ಷರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಪರವಾಗಿ ಶ್ರೀ ಜಿ.ಕೆ ಗುರಾಣಿ, ಅಧೀನ ಕಾರ್ಯದರ್ಶಿ, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, (ಪರಿಸರ ಮತ್ತು ಜೀವಿಶಾಸ್ತ್ರ), ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ನಿರ್ದೇಶಕರು ಇವರ ಪರವಾಗಿ ಡಾ. ಪಿ. ರಾಜೇಂದ್ರ, ಉಪ ನಿರ್ದೇಶಕರು, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ. ಧನ್ವಂತರಿ ರಸ್ತೆ, ಆನಂದ್ ರಾವ್ ವೃತ್ತ, ಬೆಂಗಳೂರು.
5. ಅಪರ ಪ್ರಧಾನ ಮುಖ್ಯ ಅರಣ್ಯಗಳ ಸಂರಕ್ಷಣಾಧಿಕಾರಿ ಹಾಗು ಸದಸ್ಯ ಕಾರ್ಯದರ್ಶಿ, ಕರ್ನಾಟಕ ಜೀವವೈವಿಧ್ಯ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.

ಮಂಡಳಿಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗು ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಸದಸ್ಯರನ್ನು ಸ್ವಾಗತಿಸುತ್ತಾ, ಸಭೆಯ ಕಾರ್ಯಕಲಾಪಗಳನ್ನು ಪ್ರಾರಂಭಿಸಲು ಸಭೆಯ ಅಧ್ಯಕ್ಷತೆ ವಹಿಸಿಕೊಂಡ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರನ್ನು ವಿನಂತಿಸಿದರು. ಸಭೆಯು ಆರಂಭವಾಯಿತು.

**ವಿಷಯ 1 : ದಿನಾಂಕ 19/4/2007ರಂದು ಜರುಗಿದ ಮಂಡಳಿಯ ಆರನೇ ಸಭೆಯ ನಡವಳಿಗಳನ್ನು ಓದುವುದು ಮತ್ತು ದೃಡೀಕರುಸುವುದು:**

ದಿನಾಂಕ 19/4/2007ರಂದು ಜರುಗಿದ ಮಂಡಳಿಯ ಆರನೇ ಸಭೆಯ ನಡವಳಿಗಳನ್ನು ಓದಿ ದೃಢೀಕರಿಸಲಾಯಿತು.

**ಅ) ಕರ್ನಾಟಕ ಜೀವವೈವಿಧ್ಯ ನಿಯಮಗಳು 2005ನ್ನು ಕಾನೂನುಬದ್ಧಗೊಳಿಸುವ ಬಗ್ಗೆ ಹಾಗೂ ಕೋರಂ ಸಂಖ್ಯೆಯನ್ನು ನಿರ್ಧರಿಸುವ ಬಗ್ಗೆ.**

ಸರ್ಕಾರದ ಕಾರ್ಯದರ್ಶಿಗಳು (ಪರಿಸರ ಮತ್ತು ಜೀವಿಶಾಸ್ತ್ರ) ಮಂಡಳಿಯ ಆರನೇ ಸಭೆಯಲ್ಲಿ ತೀರ್ಮಾನಿಸಿದಂತೆ ಕೋರಂ ಸಂಖ್ಯೆಯನ್ನು 5 ರಿಂದ 3ಕ್ಕೆ ಕಡಿತಗೊಳಿಸವ ಬಗ್ಗೆ ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುವುದೆಂದು ಹಾಗೂ ಈ ಕುರಿತು ಆದೇಶವನ್ನು ಹೊರಡಿಸಲಾಗುವುದೆಂದು ಸಭೆಗೆ ತಿಳಿಸಿದರು. ಮಂಡಳಿಯ ಅಧ್ಯಕ್ಷರು ಸರ್ಕಾರೇತರ ಸದಸ್ಯರುಗಳು ಈ ಹಿಂದೆ ಭಾಗವಹಿಸುವುದರ ಕುರಿತು ಮತ್ತು ಯಾವ ಹಿನ್ನಲೆಯಲ್ಲಿ ಅವರನ್ನು ಸದಸ್ಯತ್ವದಿಂದ ತೆಗೆಯಲಾಯಿತು ಎಂಬುದರ ಬಗ್ಗೆ ಮಾಹಿತಿಯನ್ನು ಕೇಳಿದರು. ಈ ಕುರಿತು ಮಾಹಿತಿಯನ್ನು ಪರಿಶೀಲಿಸಿ ಮಂಡಳಿಯನ್ನು ಪುನರ್ ರಚಿಸಲು ಕ್ರಮ ಕೈಗೊಳ್ಳುವುದಾಗಿ ಪ್ರಧಾನ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

**ಆ) ಜೀವವೈವಿಧ್ಯ ಸಂರಕ್ಷಣೆ ಸಂಬಂಧಿ ಯೋಜನೆಗಳನ್ನು ಪರಿಶೀಲಿಸಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ ಚೆನ್ನೈ ಹಾಗೂ ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ:**

ಮಂಡಳಿಯು ಈಗಾಗಲೇ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚನ್ನೈ ಮತ್ತು ಅರಣ್ಯ ಮತ್ತು ಪರಿಸರ ಮಂತ್ರಾಲಯ, ನವದೆಹಲಿ, ಇವರಿಗೆ ಸಲ್ಲಿಸಿದ ಸಂಶೋಧನಾ ಯೋಜನೆಗಳು ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಈ ಬಗ್ಗೆ ಪ್ರಸ್ತಾವನೆಗಳು ಅನುದಾನಿತ ಸಂಸ್ಥೆಗಳಲ್ಲಿ ಬಾಕಿಯಿರುವುದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ವಿಶ್ವಬ್ಯಾಂಕಿನ ಭಾರತ ಅಭಿವೃದ್ಧಿ ಮಾರುಕಟ್ಟೆಯು ಆಯ್ಕೆ ಮಾಡಿದ 2500 ಯೋಜನಾ ಪ್ರಸ್ತಾವನೆಗಳಲ್ಲಿ 50 ಪ್ರಸ್ತಾವನೆಗಳನ್ನು ಅಂತಿಮ ಪೂರ್ವ ಆಯ್ಕೆ ಮಾಡಲಾಗಿರುತ್ತದೆ. ಆಯ್ಕೆ ಮಾಡಿದ ಪ್ರಸ್ತಾವನೆಗಳ ಪಟ್ಟಿಯಲ್ಲಿ ಮಂಡಳಿಯು ಸಲ್ಲಿಸಿದ 6 ಯೋಜನೆಗಳಲ್ಲಿ ಯಾವುದೇ ಪ್ರಸ್ತಾವನೆಯು ಸೂಚಿತವಾಗಿಲ್ಲ ಎಂಬುದನ್ನು ಹಾಗೂ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದಲ್ಲಿ – 6 ಯೋಜನೆಗಳು ಅರಣ್ಯ ಮತ್ತು ಪರಿಸರ ಮಂತ್ರಾಲಯದಲ್ಲಿ 4 ಯೋಜನೆಗಳು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ 1 ಯೋಜನೆ ಬಾಕಿ ಉಳಿದಿದೆ ಎಂಬುದನ್ನು ಸಭೆಗೆ ಸದಸ್ಯ ಕಾರ್ಯದರ್ಶಿಗಳು ತಿಳಿಸಿದರು. ಈ ಕುರಿತು ಅನುದಾನದ ಸಂಸ್ಥೆಗಳನ್ನು ಯೋಜನೆಗಳ ಬಗ್ಗೆ ಮಂಜೂರಾತಿಗಾಗಿ ಪ್ರಯತ್ನಿಸಬೇಕೆಂದು ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿತು.

ತಾತಗುಣಿ ಎಸ್ಟೇಟ್‌ನ ಅಭಿವೃದ್ಧಿ ಬಗ್ಗೆ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯ, ನವದೆಹಲಿಯಿಂದ ಕೆಲವು ಆಕ್ಷೇಪಣೆಗಳು ಬಂದಿದ್ದು, ಈ ಬಗ್ಗೆ ಸಂಬಂಧಪಟ್ಟ ಅರಣ್ಯ ಸಂರಕ್ಷಣಾಧಿಕಾರಿಗಳೊಡನೆ ಚರ್ಚಿಸಿ ನ್ಯೂನತೆಗಳನ್ನು ಸರಿಪಡಿಸಿ ಅನುದಾನಕ್ಕಾಗಿ ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗುವುದೆಂದು ಸದಸ್ಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ನಿರೀಕ್ಷೆಗಳನ್ನು ಗಮನದಲ್ಲಿರಿಸಿ ಈ ಕುರಿತು ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.

**ಇ) ಶ್ರೀ ಗಂಗಾಧರ ವಿ. ಮಡ್ಡಿಕೇರಿ, ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರ ಸೇವೆಯನ್ನು ಮಂಡಳಿಯಲ್ಲಿ ಮುಂದುವರಿಸುವ ಬಗ್ಗೆ:**

6ನೇ ಮಂಡಳಿಯ ಸಭೆಯ ತೀರ್ಮಾನದಂತೆ ಶ್ರೀ ಗಂಗಾಧರ ವಿ. ಮಡ್ಡಿಕೇರಿ, ಕಾರ್ಯನಿರ್ವಹಣಾಧಿಕಾರಿ (ಮೀನುಗಾರಿಕೆ) ಇವರ ಸೇವೆಯನ್ನು ಮಾತೃ ಇಲಾಖೆಗೆ ಪತ್ರ ಸಂ.ಕಜೀಮಂ/ಸಿಬ್ಬಂದಿ/02/3–6/687 ದಿನಾಂಕ 5/6/2007 ರಂದು ಹಿಂದಿರುಗಿಸಲಾಗಿದೆ. ಮುಂದುವರೆದಂತೆ, ಶ್ರೀ ಗಂಗಾಧರ ವಿ. ಮಡ್ಡಿಕೇರಿ, ಜನತಾ ಜೀವವೈವಿಧ್ಯ ತಯಾರಿಕೆಗೆ ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಮಾಡಿದ ಅನುದಾನ ಬಿಡುಗಡೆ ಮತ್ತು ಖರ್ಚುವೆಚ್ಚದಲ್ಲಿ ಯಾವುದೇ ರೀತಿಯ ನಿಯಮಾವಳಿಗಳನ್ನು ಪಾಲನೆ ಮಾಡಿರುವುದಿಲ್ಲ. ಮಂಡಳಿಯ ಹಿತಾಸಕ್ತಿಯನ್ನು ಪರಿಗಣಿಸದೆ ಸರ್ಕಾರದ ಹಣವನ್ನು ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ ಬಿಡುಗಡೆ ಮಾಡಿರುತ್ತಾರೆ. ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ನಡುವೆ ಯಾವುದೇ ರೀತಿಯ ಕರಾರನ್ನು ಮಾಡಿಕೊಂಡಿರುವುದಿಲ್ಲ. ಬಿಡುಗಡೆ ಮಾಡಿದ ಹಣವನ್ನು ಯಾವರೀತಿ ವಿನಿಯೋಗಿಸಬೇಕು ಹಾಗು ಅವರ ಜವಾಬ್ದಾರಿಗಳೇನು ಎಂಬುದರ ಬಗ್ಗೆ ಮನವರಿಕೆ ಮಾಡಿರುವುದಿಲ್ಲ ಹಾಗೂ ಇನ್ನಿತರ ಮಂಡಳಿಯ ಯೋಜನೆಗಳನ್ನು ಅಸಮರ್ಪಕ ರೀತಿಯಲ್ಲಿ ನಿರ್ವಹಣೆ ಮಾಡಿದ್ದೂ ಅಲ್ಲದೆ ಕಛೇರಿಯ ವಾತಾವರಣವನ್ನು ಕಲುಷಿತಗೊಳಿಸಲು ಕಾರಣರಾದ ಸದರಿ ಅಧಿಕಾರಿಯ ಮೇಲೆ ಶಿಸ್ತುಕ್ರಮ ಜರುಗಿಸಲು ಮಂಡಳಿಯು ಒಪ್ಪಿಗೆ ನೀಡಿತು.

**ಈ) ಜೀವವೈವಿಧ್ಯ ಪಾರಂಪರಿಕ ತಾಣವಾಗಿ ಘೋಷಿಸುವ ಬಗ್ಗೆ:**

ನಲ್ಲೂರು ಹುಣಸೇತೋಪನ್ನು ಪಾರಂಪರಿಕ ಜೈವಿಕ ತಾಣವೆಂದು ಘೋಷಿಸಿರುವ ಹಿನ್ನಲೆಯಲ್ಲಿ ಸದರಿ ಪ್ರದೇಶದ ಸಂರಕ್ಷಣೆ ಮತ್ತು ಅಭಿವೃದ್ಧಿ ಕುರಿತು ಅರಣ್ಯ ಸಂರಕ್ಷನಾಧಿಕಾರಿಗಳು ಸಲ್ಲಿಸಿದ ಪ್ರಸ್ತಾವನೆಯನ್ನು ಸಭೆಯು ಪರಿಶೀಲಿಸಿತು. ಅದರಲ್ಲಿ ಚೈನ್ ಲಿಂಕ್ ಫೆನ್ಸಿಂಗ್‌ಗಾಗಿ ರೂ 28.71ಲಕ್ಷಗಳನ್ನು ಸೂಚಿಸಿದ್ದು ಈ ದರವು ಹೆಚ್ಚಾಗಿರುವುದರಿಂದ ಇರತಕ್ಕಂತಹ ಸುತ್ತಳತೆಗೆ ಪರಿಷ್ಕೃತ ಕಾಮಗಾರಿ ಅಂದಾಜನ್ನು ಪಡೆಯಲು ಸದಸ್ಯ ಕಾರ್ಯದರ್ಶಿಗಳಿಗೆ ಸಭೆಯು ಸೂಚಿಸಿತು. ಮುಂದುವರೆದಂತೆ ತಂತಿ ಬೇಲಿಗಿಂತ ಚೇನ್ ಲಿಂಕ್ ಬೇಲಿಯು ಉತ್ತಮವಾದುದೆಂದು ಸಭೆಯು ಅಭಿಪ್ರಾಯ ವ್ಯಕ್ತಪಡಿಸಿತು.

ಕೃಷಿ ವಿಶ್ವವಿದ್ಯಾಲಯ ಬೆಂಗಳೂರು ಇವರು ಸಲ್ಲಿಸಿದ ನಲ್ಲೂರು ಹುಣಸೇತೋಪಿನ ಯೋಜನಾ ಪ್ರಸ್ತಾವನೆಯನ್ನು ಸಭೆಯು ಅಂಗೀಕರಿಸಿ 2 ಕಂತಿನಲ್ಲಿ ರೂ 1.50 ಲಕ್ಷಗಳಂತೆ 3.00 ಲಕ್ಷಗಳನ್ನು ಯೋಜನೆಯನ್ನು ಅನುಷ್ಠಾನಗೊಳಿಸಲು ಹಣವನ್ನು ಬಿಡುಗಡೆ ಮಾಡಲು ಸಭೆಯು ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಿತು.

**ವಿಷಯ: 3 ಕುವೆಂಪು ಸ್ಮಾರಕ ಜೈವಿಕ ಕೆಲಸ ಕಾರ್ಯಗಳ ಪ್ರಗತಿ ವರದಿಯ ಕುರಿತು.**

ಕುವೆಂಪು ಸ್ಮಾರಕ ಜೈವಿಕಧಾಮದ ಕೆಲಸ ಕಾರ್ಯಗಳ ಪ್ರಗತಿ ಬಗ್ಗೆ ಚರ್ಚಿಸಲಾಯಿತು. ಹಿಂದಿನ ಸದಸ್ಯ ಕಾರ್ಯದರ್ಶಿಗಳು ಅನುಮೋದಿಸಿದ 2006–07ನೇ ಸಾಲಿನ ರೂ 19.74 ಲಕ್ಷ ಹಾಗೂ 2007–08ರ ಸಾಲಿನಲ್ಲಿ ರೂ 16.70ಲಕ್ಷ ಒಟ್ಟು ರೂ 36.44 ಲಕ್ಷಗಳ ಯೋಜನೆಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ಇವರು ಕುವೆಂಪು ಪ್ರತಿಷ್ಠಾನದೊಂದಿಗೆ ಚರ್ಚಿಸಿ ಸಲ್ಲಿಸಿದ ಪರಿಷ್ಕೃತ ಕ್ರಿಯಾ ಯೋಜನೆ ರೂ 26.46ಲಕ್ಷ ಹಾಗೂ ರೂ 17.05 ಲಕ್ಷರೂಗಳ ಯೋಜನೆಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ಹಾಗೂ ಕುವೆಂಪು ಪ್ರತಿಷ್ಠಾನದೊಂದಿಗೆ ಸದಸ್ಯ ಕಾರ್ಯದರ್ಶಿಗಳು ಚರ್ಚಿಸಿ ಅನುಮೋದಿಸಿರುವುದನ್ನು ಸಭೆಯು ಗಮನಿಸಿತು.

ಈ ಕುರಿತು ಸಭೆಯು ಕುವೆಂಪು ಜೈವಿಕಧಾಮದ ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ಫೆಬ್ರವರಿ ಮಾಸಾಂತ್ಯದೊಳಗೆ ಪೂರ್ಣಗೊಳಿಸಬೇಕೆಂಬ ಆಶಯವನ್ನು ವ್ಯಕ್ತಪಡಿಸಿತು.

**ವಿಷಯ : 4 ಜೈವಿಕ ಸಂಪನ್ಮೂಲ ಬಳಕೆಯ ಮೇಲೆ ಶುಲ್ಕ ವಿಧಿಸುವ ಬಗ್ಗೆ.**

ಜೈವಿಕ ಸಂಪನ್ಮೂಲಗಳನ್ನು ಬಳಸುತ್ತಿರುವ ಔಷಧಿ ಕಂಪೆನಿಗಳ ವಹಿವಾಟಿನ ಮೇಲೆ ಪ್ರತಿಶತ 1 ಅಥವಾ 2ರಷ್ಟನ್ನು ವಾರ್ಷಿಕ ಶುಲ್ಕ ಆಕರಿಸುವ ಬಗ್ಗೆ ಮಂಡಳಿಯು ಸಲ್ಲಿಸಿದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದ್ದು ಸೂಕ್ತ ಆದೇಶವನ್ನು ಸಧ್ಯದಲ್ಲಿಯೇ ಹೊರಡಿಸಲಾಗುವುದೆಂದು ಸರ್ಕಾರದ ಕಾರ್ಯದರ್ಶಿಗಳು (ಪರಿಸರ ಮತ್ತು ಜೀವಿಶಾಸ್ತ್ರ) ಸಭೆಗೆ ತಿಳಿಸಿದರು.

ಬಹುತೇಕ ಔಷಧಿ ಕಂಪನಿಗಳು ಗುತ್ತಿಗೆದಾರರಿಂದ ಔಷಧಿ ಸಸ್ಯಗಳನ್ನು ಸಂಗ್ರಹಿಸುವುದಾಗಿ ತಿಳಿಸಿರುವುದುನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು. ಆದರೆ ಯಾವ ಪ್ರದೇಶದಿಂದ ಔಷಧಿ ಸಸ್ಯಗಳನ್ನು/ಜೈವಿಕ ಸಂಪನ್ಮೂಲಗಳನ್ನು ಸಂಗ್ರಹಿಸಿತ್ತಾರೆ ಎಂಬ ಬಗ್ಗೆ ಮಾಹಿತಿಯನ್ನು ಔಷದಿ

ಕಂಪನಿಗಳು ನೀಡಿರುವುದಿಲ್ಲ. ಸಭೆಯು ಈ ಕುರಿತು ಚರ್ಚಿಸಿ ಔಷಧಿ ಸಸ್ಯಗಳ ಸಂಗ್ರಹಣಾ ಪ್ರದೇಶಗಳ ಬಗ್ಗೆ ಮಾಹಿತಿಯನ್ನು ಗುತ್ತಿಗೆದಾರರಿಂದ ಪಡೆಯಲು ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಿತು. ಮುಂದುವರೆದಂತೆ, ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿದ ಔಷಧಿ ತಯಾರಿಕಾ ಕಂಪೆನಿಗಳಿಗೆ ಮಂಡಳಿಯು ಔಷದಿ/ ಜೈವಿಕ ಸಂಪನ್ಮೂಲಗಳನ್ನು ಉಪಯೋಗಿಸಲು ಪರವಾನಿಗೆ ನೀಡಲು ಸಭೆಯು ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರವನ್ನು ನೀಡಿತು.

ಔಷಧಿ ಕಂಪೆನಿಗಳು ಔಷಧಿ ಸಸ್ಯಗಳನ್ನು ಸಂಗ್ರಹಿಸಿದ ಪ್ರದೇಶದ ಬಗ್ಗೆ ಮಾಹಿತಿ ನೀಡದಿದ್ದರೆ ಜೈವಿಕ ಅಧಿನಿಯಮ 2002ರನ್ವಯ ಕಾನೂನು ಕ್ರಮ ಜರುಗಿಸಲು ಸಭೆಯು ಅಭಿಪ್ರಾಯಪಟ್ಟಿತು. ಈ ಕುರಿತು ಕಾನೂನು ಕ್ರಮ ಜರುಗಿಸಲು ಕೆಲವು ಅಧಿಕಾರಿಗಳನ್ನು ಸಕ್ಷಮ ಅಧಿಕಾರಿಗಳೆಂದು (Authorized Officer) ನೇಮಕ ಮಾಡಬೇಕಾಗುತ್ತದೆ ಎಂದು ಸದಸ್ಯ ಕಾರ್ಯದರ್ಶಿಗಳು ತಿಳಿಸಿದರು. ಈ ಕುರಿತು ಸಭೆಯು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಸಭೆಯು ಸೂಚಿಸಿತು.

**ವಿಷಯ 5 : ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ ಕುರಿತು:**

ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆ ಕೆಲಸವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಇಲಾಖೆ, ಸರ್ಕಾರೇತರ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಮಹಾವಿದ್ಯಾಲಯಗಳು ಹಾಗೂ ಪರಿಸರ ನೀತಿ ನಿರ್ವಹಣಾ ಸಂಸ್ಥೆಗೆ ನೀಡಿರುವುದನ್ನು ಸಭೆಯು ಗಮನಿಸಿತು. ಮುಂದುವರೆದಂತೆ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಪ್ರಕ್ರಿಯೆಗೆ ಸರ್ಕಾರೇತರ ಸಂಸ್ಥೆಗಳಿಗೆ ಆಹ್ವಾನ ನೀಡಿದ ಮೇರೆಗೆ 182 ಸಂಸ್ಥೆಗಳಿಂದ ಪ್ರಸ್ತಾವನೆಗಳು ಬಂದಿದ್ದು ಅವುಗಳಲ್ಲಿ ಈ ಕೆಳಗಿನ 6 ಸಂಸ್ಥೆಗಳನ್ನು ಮೊದಲನೆ ಹಂತದಲ್ಲಿ ತೊಡಗಿಸಿಕೊಳ್ಳಲು ಮಂಡಳಿಯು ತೀರ್ಮಾನಿಸಿತು.

1. ಸಂಜೀವಿನ ವಿದ್ಯಾವರ್ಧಕ ಸಂಸ್ಥೆ, ಬ್ರಹ್ಮಪೂರ, ಗುಲ್ಬರ್ಗಾ
2. ಸ್ಕೊಡ್‌ವೆಸ್ ಸಂಸ್ಥೆ (ರಿ), ಸವಿನಿಲಯ, ಮರಾಠಿಕೊಪ್ಪ ಮುಖ್ಯ ರಸ್ತೆ, ಶಿರಸಿ, ಉತ್ತರ ಕನ್ನಡ – 581401
3. ಕರ್ನಾಟಕ ಯುನಾನಿ ಮೆಡಿಕಲ್ ಅಸೋಸಿಯೇಷನ್, ನಂ.170, 7ನೇ ಅಡ್ಡರಸ್ತೆ, ಬಿ.ಎಂ ನಗರ, ತಾವರೆಗೆ ಪಾರ್ಕ್, ಬಿ.ಇ.ಟಿ. ಸ್ಕೂಲ್ ರಸ್ತೆ, ಬೆಂಗಳೂರು–29
4. ಸಮಾಜ ಪರಿವರ್ತನ ಸಮುದಾಯ (ಎಸ್.ಪಿ.ಎಸ್) ಆಶಾದೀಪ, ಜಯನಗರ ಕ್ರಾಸ್, ಸಪ್ತಾಪುರ, ಧಾರವಾಡ–01.
5. ಬಿಜಾಪುರ ಇಂಟಿಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ಬರ್ಡ್ಸ್) ಹುನಗುಂದ, ನಾಗಲಿಂಗನಗರ ಹತ್ತಿರ, ಎನ್.ಹೆಚ್ 13 ಹುನಗುಂದ–587118 ಬಾಗಲಕೋಟೆ ಜಿಲ್ಲೆ.
6. ನಗರ ಹಾಗೂ ಗ್ರಾಮೀಣ ಅಭಿವೃದ್ಧಿಗಾಗಿ ಸಮೂಹ ಗಾರ್ಡ್ ಸಂಸ್ಥೆ, ಕೇಂದ್ರ ಕಛೇರಿ, ನಂ 20, ಬ್ಲಾಕ್ ನಂ.7, 3ನೇ ಮುಖ್ಯ ರಸ್ತೆ, ಮಹಾಶಕ್ತಿ ರಸ್ತೆ, ಶಕ್ತಿ ನಗರ, ಮೈಸೂರು–57 0019.

**ವಿಷಯ: 6: 2007–08ನೇ ಸಾಲಿನ ಮಂಡಳಿಯ ಆಯವ್ಯಯ ಬಗ್ಗೆ.**

ಈ ಕುರಿತು ಸಭೆಯಲ್ಲಿ 2007–08ನೇ ಸಾಲಿನ ಆಯವ್ಯಯವನ್ನು ಚರ್ಚಿಸಿ ಅನುಮೋದಿಸಲಾಯಿತು.

**ವಿಷಯ: 7: ಕರ್ನಾಟಕ ಜೀವವೈವಿಧ್ಯ ಮಂಡಳಿಯ 2003–04, 2004–05 ಮತ್ತು 2005–06 ಆರ್ಥಿಕ ವಾರ್ಷಿಕ ವರದಿಗಳ ಮೇಲೆ ಮಹಾಲೇಖಪಾಲರ ಆಕ್ಷೇಪಣೆಗಳಿಗೆ ಉತ್ತರ ಸಲ್ಲಿಸುವ ಕುರಿತು.**

**1. 2003–04, 2004–05 ಮತ್ತು 2005–06 ಲೆಕ್ಕಪತ್ರಗಳನ್ನು ಅನುಮೋದಿಸುವ ಬಗ್ಗೆ:**

ಮಂಡಳಿಯ ಲೆಕ್ಕಪತ್ರ ವರದಿ, ಲೆಕ್ಕಪಾಲಕರ ಆಕ್ಷೇಪಣೆಗಳಿಗೆ ಸದಸ್ಯ ಕಾರ್ಯದರ್ಶಿಯವರು ಸಲ್ಲಿಸಿದ ಉತ್ತರಗಳನ್ನು ಸಭೆಯು ಅನುಮೋದಿಸಿ ಮಹಾಲೇಖಪಾಲರು ಕಳುಹಿಸಿದ ಲೆಕ್ಕಪತ್ರ ವರದಿಗಳನ್ನು ಮತ್ತು ಲೆಕ್ಕಪತ್ರ ಧೃಢೀಕರಣ ಪತ್ರಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿ ಮಂಡಳಿಯು ನಿಯಮಗಳನ್ವಯ ಈ ಕುರಿತು ಮುಂದಿನ ಕ್ರಮಕೈಗೊಳ್ಳಲು ಸದಸ್ಯ ಕಾರ್ಯದರ್ಶಿಗಳಿಗೆ ಸಭೆಯು ಅಧಿಕಾರ ನೀಡತು.

**2. 2006–07ರ ಲೆಕ್ಕಪತ್ರ ವರದಿಯ ಮಂಡನೆ ಬಗ್ಗೆ:**

ಕರ್ನಾಟಕ ಜೀವವೈವಿಧ್ಯ ಮಂಡಳಿಯ 2006–07ನೇ ಲೆಕ್ಕಪತ್ರ ವರದಿಯನ್ನು ಸಭೆಯ ಮುಂದಿಡಲಾಯಿತು. ಈ ಬಗ್ಗೆ ಚರ್ಚಿಸಿ ಸಭೆಯು ಅನುಮೋದಿಸಿತು ಹಾಗೂ ಲೆಕ್ಕಪತ್ರಗಳನ್ನು ಪರಿಶೋಧಿಸಲು ಮಹಾಲೇಖಪಾಲಕರಿಗೆ ಕಳುಹಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರವನ್ನು ನೀಡಿತು.

**3. 2006–07ರ ವಾರ್ಷಿಕ ವರದಿಯ ಮಂಡನೆ ಬಗ್ಗೆ.**

2006–07ರ ವಾರ್ಷಿಕ ವರದಿಯನ್ನು ಸಭೆಯ ಮುಂದಿಡಲಾಯಿತು. ಸಭೆಯು ಇದನ್ನು ಗಮನಿಸಿತು.

**ವಿಷಯ:8: ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮುಖಾಂತರ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಗೆ ಅರಿವು, ತರಬೇತಿ ಮತ್ತು ಮಾರ್ಗದರ್ಶನವನ್ನು ನೀಡಲು ಸಮಾಲೋಚಕರ / ತಜ್ಞರ ನೇಮಕಾತಿ ಬಗ್ಗೆ**

ಕರ್ನಾಟಕ ಜೀವವೈವಿಧ್ಯ ಮಂಡಳಿಯು ಕಾಲಕಾಲಕ್ಕೆ ಜೀವವೈವಿಧ್ಯ ಸಂಭಂಧಿತ ಅರಿವು, ಜಾಗೃತಿ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಕೈಗೊಳ್ಳಬೇಕಾಗಿರುತ್ತದೆ. ಈ ಸಂಬಂಧ ಜೀವವೈವಿಧ್ಯ ನಿಯಮಾವಳಿಯ ಪ್ರಕರಣ 22 (7) ರಂತೆ ಸಮಾಲೋಚಕರನ್ನು ನೇಮಿಸಿಕೊಳ್ಳುವ ಅವಕಾಶವಿರುತ್ತದೆ. ಈ ಹಿನ್ನಲೆಯಲ್ಲಿ ರಾಜ್ಯಾದ್ಯಂತ ತರಬೇತಿ ಹಾಗೂ ಅರಿವನ್ನುಂಟುಮಾಡಲು ಸಮಾಲೋಚಕರು/ ಸಂಸ್ಥೆಯನ್ನು ನೇಮಕ ಮಾಡಿಕೊಳ್ಳುವುದು ಸೂಕ್ತವಾಗಿರುತ್ತದೆ. ಸಮಾಲೋಚಕರನ್ನು ಸಂಪನ್ಮೂಲಗಳ ವ್ಯಕ್ತಿಯನ್ನಾಗಿ ತರಬೇತಿ ಕಾರ್ಯಕ್ರಮಗಳಿಗೆ ನಿಯೋಜಿಸಲಾಗುತ್ತದೆ.

ಮುಂದುವರೆದಂತೆ, ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮುಖಾಂತರ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಗೆ ಅರಿವು, ತರಬೇತಿ ಮತ್ತು ಮಾರ್ಗದರ್ಶನವನ್ನು ನೀಡಲು ಸಮಾಲೋಚಕರಿಗೆ / ತಜ್ಞರಿಗೆ ರೂ 5,000/-ಗಳ ಸಂಭಾವನೆ ಪ್ರಸ್ತಾವನೆಯನ್ನು ಸಭೆಯು ಗಮನಿಸಿ ಅದು ಹೆಚ್ಚಾಗಿರುವುದೆಂದು ಅಭಿಪ್ರಾಯಪಟ್ಟು ತಲಾ ಕಾರ್ಯಕ್ರಮಕ್ಕೆ ರೂ 3,000/-ಗಳನ್ನು ನೀಡಲು ಮಂಡಳಿಯು ಅನುಮೋದಿಸಿತು ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ತಗಲುವ ವೆಚ್ಚವನ್ನು ಭರಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ನೀಡಲಾಯಿತು.

**ವಿಷಯ: 9: ಜೀವವೈವಿಧ್ಯ ಸೂಕ್ಷ್ಮನೆಲೆ ತಾಣಗಳ ಬಗ್ಗೆ:**

ಪರಿಸರ ವಿಜ್ಞಾನ ಕೇಂದ್ರ, ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರಾದ ಪ್ರೋ ಮಾದವ ಗಾಡ್ಗಿಲ್ ಅವರ ನೇತೃತ್ವದಲ್ಲಿ ಕರ್ನಾಟಕದಲ್ಲಿ ಹಲವಾರು ಸೂಕ್ಷ್ಮ ಜೀವವೈವಿಧ್ಯ ಸೂಕ್ಷ್ಮನೆಲೆ ತಾಣಗಳನ್ನು ಗುರುತಿಸಿರುತ್ತಾರೆ. ಈ ಜೀವವೈವಿಧ್ಯ ಸೂಕ್ಷ್ಮನೆಲೆಗಳನ್ನು ಪಾರಂಪರಿಕ ಜೀವವೈವಿಧ್ಯ ತಾಣವನ್ನಾಗಿ ಘೋಷಿಸುವ ಸಲುವಾಗಿ ಸದಸ್ಯ ಕಾರ್ಯದರ್ಶಿಗಳು ಆಯಾ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕೋರಲಾಗಿದೆಯೆಂದು ಸಭೆಗೆ ತಿಳಿಸಿದರು. ಜೀವವೈವಿಧ್ಯ ಪಾರಂಪರಾಗತ ತಾಣಗಳ ಪ್ರಸ್ತಾವನೆಗಳನ್ನು ಅತ್ಯಂತ ತ್ವರಿತಗತಿಯಲ್ಲಿ ತಯಾರಿಸಿ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಸಭೆಯು ಸೂಚಿಸಿತು.

**ವಿಷಯ: 10 : ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಿಬ್ಬಂದಿ ವರ್ಗದವರಿಗೆ ಪ್ರವಾಸ ಭತ್ಯೆ ನೀಡುವ ಬಗ್ಗೆ.**

ಕರ್ನಾಟಕ ಜೀವವೈವಿಧ್ಯ ಮಂಡಳಿಯ ವಾಹನ ಚಾಲಕರಿಗೆ ಪ್ರವಾಸ ಭತ್ಯೆ ನೀಡುವ ಬಗ್ಗೆ ಸಭೆಯು ಚರ್ಚಿಸಿತು. ಮುಂದುವರೆದಂತೆ ಸರ್ಕಾರದ ವಾಹನ ಚಾಲಕರಿಗೆ ಅನ್ವಯಿಸುವ ಪ್ರವಾಸ ಭತ್ಯೆಯನ್ನು ಪ್ರವಾಸ ಕೈಗೊಂಡಾಗ ಹೊರಗುತ್ತಿಗೆ ಸಂಸ್ಥೆಯ ಮುಖಾಂತರ ಮಂಡಳಿಯು ವಾಹನ ಚಾಲಕರಿಗೆ ನೀಡಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರವನ್ನು ನೀಡಿತು.

**ವಿಷಯ : 11. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ವಸತಿ ಗೃಹದ ಸೌಲಭ್ಯ ಒದಗಿಸುವ ಬಗ್ಗೆ.**

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ವಸತಿ ಗೃಹದ ಸೌಲಭ್ಯ ಒದಗಿಸುವ ಬಗ್ಗೆ ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹಾಗೂ ಈ ಕುರಿತು ಕ್ರಮ ಕೈಗೊಳ್ಳಲಾಗುವುದೆಂದು ಸರ್ಕಾರದ ಕಾರ್ಯದರ್ಶಿಗಳು (ಪರಿಸರ ಮತ್ತು ಜೀವಿಶಾಸ್ತ್ರ) ಸಭೆಗೆ ತಿಳಿಸಿದರು.

**ವಿಷಯ: 12: ಅರಣ್ಯ ಪ್ರದೇಶದೊಳಗಿನ ಜೀವವೈವಿಧ್ಯ ದಾಖಲಾತಿ ಕ್ರಮದ ಬಗ್ಗೆ**

ಈ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಅರಣ್ಯ ಪ್ರದೇಶದ ನಿರ್ವಹಣೆಯ ಕಾರ್ಯ ಯೋಜನೆಯಲ್ಲಿ ಕೇವಲ ಮರಮುಟ್ಟುಗಳು ಹಾಗೂ ಪ್ರಾಮುಖ್ಯವಾದ ಅರಣ್ಯ ಕಿರು ಉತ್ಪನ್ನಗಳಿಗೆ ಸೀಮಿತವಾಗಿರುವುದನ್ನು ಸಭೆಯು ಗಮನಿಸಿ ಇದರೊಟ್ಟಿಗೆ ಇನ್ನಿತರ ಜೀವ ಸಂಕುಲವನ್ನು, ಔಷಧಿ ಸಸ್ಯಗಳು ಹಾಗೂ ಇತರ ಪ್ರಾಣಿ ಸಸ್ಯಗಳನ್ನು ದಾಖಲಿಸಬೇಕೆಂಬ ಆಶಯವನ್ನು ಸಭೆಯು ವ್ಯಕ್ತಪಡಿಸಿತು. ಅದರಂತೆ, ಅರಣ್ಯ ಪ್ರದೇಶದಲ್ಲಿ ದೊರೆಯುವ ಮರ ಮತ್ತು ಅರಣ್ಯ ಮುಖ್ಯ ಕಿರು ಉತ್ಪನ್ನಗಳು ಅದರೊಂದಿಗೆ ಇನ್ನಿತರ ಔಷಧಿ ಸಸ್ಯಗಳು, ವಿವಿಧ ವರ್ಗಗಳಿಗೆ ಸೇರಿದ ಇನ್ನಿತರ ಸಸ್ಯಗಳಾದ ಸೀತಾಳೆ, ಗ್ರೌಂಡ್ ಪ್ಲೋರಾ ಹಾಗೂ ಔಷಧೀಯ ಗುಣಗಳುಳ್ಳ ಸಸ್ಯಗಳನ್ನು ಹಾಗೂ ಇತ್ಯಾದಿ ಸಸ್ಯಗಳ ದಾಖಲೀಕರಣದ ಬಗ್ಗೆ ಅರಣ್ಯ ಇಲಾಖೆಗೆ ಪತ್ರ ಬರೆಯಲು ಸಭೆಯು ಸದಸ್ಯ ಕಾರ್ಯದರ್ಶಿಯವರಿಗೆ ಸೂಚಿಸಿತು.

**ವಿಷಯ: 13 : ಮಂಗಳೂರು ವಿಶ್ವವಿದ್ಯಾಲಯ ಮಂಗಳೂರು ಇವರು ನಡೆಸುವ ಜೈವಿಕ ವೈವಿಧ್ಯ ಕಾರ್ಯಗಾರ ನಡೆಸಲು ಆರ್ಥಿಕ ನೆರವು ಬಗ್ಗೆ.**

ಮಂಗಳೂರು ವಿಶ್ವವಿದ್ಯಾಲಯ ಮಂಗಳೂರು ಇವರು ನಡೆಸುವ ಜೈವಿಕ ವೈವಿದ್ಯ ಕಾರ್ಯಗಾರಕ್ಕೆ ಆರ್ಥಿಕ ನೆರವಿನ ಬಗ್ಗೆ ಚರ್ಚಿಸಿ ಮಂಡಳಿಯು ರೂ20,000/–(ರೂ ಇಪ್ಪತ್ತು ಸಾವಿರ ಮಾತ್ರ)ಗಳ ಅನುದಾನವನ್ನು ಬಿಡುಗಡೆ ಮಾಡಲು ಸಭೆಯು ತೀರ್ಮಾನಿಸಿತು.

**ವಿಷಯ: 14 : ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಿಬ್ಬಂದಿ ನೇಮಕಾತಿ ಬಗ್ಗೆ:**

ಸಭೆಯಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಸಿಬ್ಬಂದಿ ಕುರಿತು ದೀರ್ಘವಾಗಿ ಚರ್ಚಿಸಲಾಯಿತು. ಅನಾನುಭವಿ ಸಿಬ್ಬಂದಿಗಳಿಂದ ಕಛೇರಿಯ ಕೆಲಸಕಾರ್ಯಗಳು ಅಸಮರ್ಪಕವಾಗಿ ನಿರ್ವಹಣೆಯಾಗುತ್ತಿದ್ದು, ಸೂಕ್ತ ವಿದ್ಯಾರ್ಹತೆ, ಅನುಭವ ಹೊಂದಿದ ಅಭ್ಯರ್ಥಿಗಳು ಹೊರಗುತ್ತಿಗೆ ಸಂಸ್ಥೆಯಿಂದ ಲಭ್ಯತೆಯಿಲ್ಲದಿರುವುದನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು. ಮುಂದುವರೆದಂತೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಲೆಕ್ಕಿಗರಿಗೆ ಸರ್ಕಾರದ ಲೆಕ್ಕ ಪತ್ರಗಳ ನಿರ್ವಹಣೆಯ ಅನುಭವವಿಲ್ಲದಿರುವುದರಿಂದ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಲೆಕ್ಕಪತ್ರಗಳು ಅಸಮರ್ಪಕ ರೀತಿಯಲ್ಲಿ ನಿರ್ವಹಣೆಯಾಗುತ್ತಿರುವುದನ್ನು ಸಭೆಯು ಗಂಭೀರವಾಗಿ ಪರಿಗಣಿಸಿತು. ಆದುದರಿಂದ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ (State Accounts Department) ಲೆಕ್ಕಗರನ್ನು (Accountant) / ಅಧೀಕ್ಷಕ ಲೆಕ್ಕಿಗರನ್ನು (Accounts Superintendent) ನಿಯೋಜನೆ ಮೇರೆಗೆ ಮಂಡಳಿಯಲ್ಲಿ ನೇಮಕಾತಿ ಮಾಡಲು ಸಭೆಯು ತೀರ್ಮಾನಿಸಿತು.

ಮಂಡಳಿಯ ಲೆಕ್ಕಪತ್ರಗಳ ನಿರ್ವಹಣೆಯನ್ನು ಮಾಡಲು ಮೆ. ಪಾಂಡುರಂಗ ಶೆಣೈ ಮತ್ತು ಕಂಪೆನಿ ಅವರನ್ನು ನೇಮಕಾತಿಗೊಳಿಸಲು ಮಾಡಿದ ಪ್ರಸ್ತಾವನೆಯನ್ನು ಸಭೆಯು ಚರ್ಚಿಸಿ ಅದಕ್ಕೆ ತಗಲುವ ಮಾಹೆಯಾನ ರೂ.6,000/–ಗಳ ವೆಚ್ಚವು ಅಧಿಕವಾಗಿರುವುದರಿಂದ ವಾರ್ಷಿಕವಾಗಿ ನಿರ್ಧಿಷ್ಟ ಮೊತ್ತವನ್ನು ನಿಗಧಿಪಡಿಸಿ ಸದರಿ ಲೆಕ್ಕಪತ್ರ ನಿರ್ವಹಣೆಯನ್ನು ಮೆ. ಪಾಂಡುರಂಗ ಶೆಣೈ ಮತ್ತು ಕಂಪೆನಿ ಅವರಿಂದ ಮಾಡಿಕೊಳ್ಳಲು ಸಭೆಯು ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಿತು.

ಮುಂದುವರೆದಂತೆ, ಮಂಡಳಿಗೆ ಆಡಳಿತಾಧಿಕಾರಿ ಹಾಗು ಇತರ ಕೆಲವು ಹುದ್ದೆಗಳನ್ನು ಸರ್ಕಾರದಿಂದ ನಿಯೋಜನೆ ಮೇರೆಗೆ / ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಪುನರ್‌ರಚನೆ ಪ್ರಸ್ತಾವನೆಯನ್ನು ಸಭೆಯು ಅಂಗೀಕರಿಸಿ ಸರ್ಕಾರಕ್ಕೆ ಸಲ್ಲಿಸಲು ಸದಸ್ಯ ಕಾರ್ಯಗಳಿಗೆ ಸೂಚಿಸಿತು.

**ವಿಷಯ 15. 2008–09ರ ಸಾಲಿನ ಆಯವ್ಯಯ ಪ್ರಸ್ತಾವನೆ ಬಗ್ಗೆ:**

ಮಂಡಳಿಯ ಸದಸ್ಯ ಕಾರ್ಯದರ್ಶಿಗಳು 2008–09ರ ಸಾಲಿನ ರೂ 110 ಲಕ್ಷಗಳ ಆಯವ್ಯಯವನ್ನು ಸಭೆಯ ಗಮನಕ್ಕೆ ತರಲಾಯಿತು.

**ಮಂಡಳಿಯ ಅಧ್ಯಕ್ಷರ ಒಪ್ಪಿಗೆ ಮೇರೆಗೆ ಇತರ ವಿಷಯಗಳು**

**1. ಕರ್ನಾಟಕ ಜೀವವೈವಿಧ್ಯ ಮಂಡಳಿಯಿಂದ ವಾರ್ತಾಪತ್ರಿಕೆಯನ್ನು ಹೊರಡಿಸುವ ಬಗ್ಗೆ:**

ಕರ್ನಾಟಕ ಜೀವವೈವಿಧ್ಯ ಮಂಡಳಿಯಿಂದ ವಾರ್ತಾಪತ್ರಿಕೆಯನ್ನು ಹೊರಡಿಸುವ ಬಗ್ಗೆ ಚರ್ಚಿಸಿತು. ರಾಜ್ಯದ ಜೀವವೈವಿಧ್ಯತೆ, ಸಂರಕ್ಷಣೆ ಸಂಬಂಧಿಸಿದ ಲೇಖನಗಳನ್ನು, ವರದಿಗಳನ್ನು ನಾಲ್ಕು ತಿಂಗಳಿಗೊಮ್ಮೆ ವಾರ್ತಾ ಪತ್ರಿಕೆಯನ್ನು ಪ್ರಕಟಿಸಲು ಸಭೆಯು ಅನುಮೋದನೆ ನೀಡಿತು.

**2. ಪಶ್ಚಿಮ ಘಟ್ಟಗಳ ಸಸ್ಯ ಸಂಪನ್ಮೂಲಗಳ ರಾಷ್ಟೀಯ ಸಮ್ಮೇಳನದ ನಡಾವಳಿಗಳ ಪ್ರಕಟಣೆ ಬಗ್ಗೆ:**

ಕರ್ನಾಟಕ ಜೀವವೈವಿಧ್ಯ ಮಂಡಳಿಯು ರಾಷ್ಟ್ರೀಯ ಜೀವವೈವಿಧ್ಯ ಪಾಧಿಕಾರ ಚನ್ನೈವತಿಯಿಂದ ಹಮ್ಮಿಕೊಳ್ಳಲಾದ ದಿನಾಂಕ 7–8 ಡಿಸೆಂಬರ್ 2006ರಂದು ನಡೆಸಿದ ಪಶ್ಚಿಮ ಘಟ್ಟಗಳ ಸಸ್ಯ ಸಂಪನ್ಮೂಲಗಳ ರಾಷ್ಟೀಯ ಸಮ್ಮೇಳನದ ನಡಾವಳಿಗಳನ್ನು ಮುದ್ರಿಸಲು ಮಂಡಳಿಯಲ್ಲಿ ಹಣಕಾಸಿನ ಕೊರತೆಯಿರುವುದನ್ನು ಸಭೆಯು ಗಮನಿಸಿ ಸದರಿ ನಡಾವಳಿಯನ್ನು ಮುದ್ರಿಸಲು ರಾಷ್ಟ್ರೀಯ ಜೀವವೈವಿಧ್ಯ ಪಾಧಿಕಾರದಿಂದ ಅನುದಾನ ಪಡೆಯಲು ಸಭೆಯು ತೀರ್ಮಾನಿಸಿತು.

ಸದಸ್ಯ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

**ಅಧ್ಯಕ್ಷರು, ಕರ್ನಾಟಕ ಜೀವವೈವಿಧ್ಯ ಮಂಡಳಿ ಹಾಗೂ**
**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**
**ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ**
**ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001**